ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ ರವರ ನ್ಯಾಯಾಲಯ, ಮೂಡಿಗೆರೆ
ಸಿ.ಸಿ.**115/2020**

| | | |
|---|---|---|
| ಸಾಕ್ಷಿದಾರರ ಹೆಸರು | : ಶಾಮಾಚಾರ್ | ಪ್ರಾಸಾ -6 |
| ತಂದೆಯ ಹೆಸರು | : ಲಿಂಗಾಚಾರ್ | ಚಾಸಾ-6 |
| ವಯಸ್ಸು | : 54 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಿನ್ನದ ವ್ಯಾಪಾರ | ದಿನಾಂಕಃ.29.01.2025 |
| ವಾಸಸ್ಥಳ | : ಕುಣಿಗಲ್ | |

:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:

2 ನೇ ಆರೋಪಿಯನ್ನು ನಾನು ನೋಡಿದ್ದೇನೆ. 2 ನೇ ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

ಸಾಕ್ಷಿಯು ದಿ.11.11.2019 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಎರಡು ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಮಹಜರ್ ನ್ನು ನಿಪಿ-30, ಸಾಕ್ಷಿಯ ಸಹಿಯನ್ನು ನಿಪಿ-30(ಎ), ಪೋಟೋಗಳನ್ನು ನಿಪಿ-31 ಮತ್ತು 32 ಎಂದು ಗುರುತಿಸಲಾಯಿತು.

ದಿ.05.01.2020 ರಂದು ಬೆ.11.00 ರಿಂದ 12.00 ಗಂಟೆವರೆಗೂ ನನ್ನ ಅಂಗಡಿಯಲ್ಲಿ ಪೋಲಿಸರು ಯಾರೋ ಕಳ್ಳತನ ಮಾಡಿರುವ ಚಿನ್ನದ ವಸ್ತುವನ್ನು ಖರೀದಿಸಿದ್ದೀಯ ಎಂದು ಮಹಜರ್ ಮಾಡಿ ನನ್ನ ಬಳಿ ಇದ್ದ 4 ಗ್ರಾಂ ನ ಚಿನ್ನದ ಓಲೆ ಮತ್ತು 3 ಗ್ರಾಂ ನ ಉಂಗುರವನ್ನು ವಶಕ್ಕೆ ಪಡೆದಿದ್ದಾರೆ. ಆ ದಿನ ಕಳ್ಳತನ ಮಾಡಿದ್ದ ವ್ಯಕ್ತಿಯನ್ನು ಪೋಲಿಸರು ಕರೆದುಕೊಂಡು ಬಂದಿದ್ದು ಅವರ ಹೆಸರು ಹುಸೇನ್ ಎಂದು ಹೇಳುತ್ತಿದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:

ಪೋಲಿಸರು 1 ನೇ ಆರೋಪಿಯನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ.

ಪಾಟೀ ಸವಾಲು: **2** ನೇ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.